## 1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ

### ವಿಶೇಷ/ಸತ್ರ ಮೊಕದ್ದಮೆ ಸಂಖ್ಯೆಃ 816/2021

ಪ್ರಾಸಾಃ- 13 ಚಾಸಾಃ- 15

| | | |
|---|---|---|
| ಸಾಕ್ಷಿಯ ಹೆಸರು | : | ಅನೂಪ್ ಕುಮಾರ್ |
| ತಂದೆಯ ಹೆಸರು | : | ಹುಸೇನಯ್ಯ |
| ವಯಸ್ಸು | : | 42 ವರ್ಷ |
| ವೃತ್ತಿ | : | ಸ್ಟೋರ್ ಮ್ಯಾನೇಜರ್ |
| ವಾಸಸ್ಥಳ | : | ಬಳ್ಳಾರಿ |

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 12.12.2023

### ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ

ಚಾಸಾ 1 ನನ್ನ ಹೆಂಡತಿ , ನಾವು ಆದಿ ಕರ್ನಾಟಕ ಜನಾಂಗಕ್ಕೆ ಸೇರಿರುತ್ತೇವೆ . ಮೃತ ಜಯಮ್ಮ ಮತ್ತು ರಾಮಲಕ್ಷ್ಮಿ ಕ್ರಮವಾಗಿ ನನ್ನ ಅತ್ತೆ ಮತ್ತು ಸೊಸೆ (ನಾದಿನಿ) ಇರುತ್ತಾರೆ . ಸಾಕ್ಷಿಗೆ ವಿ ಸಿ ಮುಖಾಂತರ 1 ಮತ್ತು 2 ನೇ ಆರೋಪಿತರನ್ನು ತೋರಿಸಲಾಗಿ ನೋಡಿ ಗುರುತಿಸಿರುವುದಿಲ್ಲ ಮತ್ತು ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರನ್ನು ನೋಡಿ ಗುರುತಿಸಿರುವುದಿಲ್ಲ .

ನನ್ನ ಅತ್ತೆ ಮತ್ತು ನಾದಿನಿ ಈಗ್ಗೆ 2-3 ವರ್ಷಗಳ ಹಿಂದೆ ಎಲ್ಲಿಗೋ ಹೋಗಿದ್ದರು ನಂತರ ಬಳ್ಳಾರಿ ಪೋಲೀಸರು ನಮಗೆ ಅವರನ್ನು ಹೊಡೆದು ಕಾಲುವೆಗೆ ಹಾಕಿರುತ್ತಾರೆ ಎಂದು ತಿಳಿಸಿರುತ್ತಾರೆ . ನನ್ನ ಅತ್ತೆ ಮತ್ತು ನಾದಿನಿಯನ್ನು ಯಾರು ಮತ್ತು ಯಾವ ಕಾರಣಕ್ಕೆ ಹೊಡೆದು ಕೊಲೆ ಮಾಡಿರುತ್ತಾರೆ ಗೊತ್ತಿಲ್ಲ . ಆರೋಪಿತರು ನನ್ನ ಅತ್ತೆ ಮತ್ತು ನಾದಿನಿಯನ್ನು ಹಣಕಾಸಿನ ವಿಚಾರದಲ್ಲಿ ಅಪಹರರಿಸಿ ಕಬ್ಬಿಣದ ರಾಡಿನಿಂದ ಹೊಡೆದು ಬಂಗಾರದ ಆಭರಣ ತೆಗೆದುಕೊಂಡು ಕೆನಾಲ್ ಗೆ ಹಾಕಿ ಸಾಯಿಸಿದ ಬಗ್ಗೆ ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ಮತ್ತು ಮರು ಹೇಳಿಕೆಗಳನ್ನು ಕೊಟ್ಟಿರುವುದಿಲ್ಲ . ಘಟನೆ ಬಗ್ಗೆ ನನಗೇನು ಗೊತ್ತಿಲ್ಲ .

( ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸ ಬೇಕೆಂದು ಪ್ರಾಜ್ಞ ಅಭಿಯೋಜಕರು ಕೋರಿದ್ದು , ಕೋರಿಕೆ ಸಕಾರಣಗಳಿಂದ ಕೂಡಿದ್ದು ಅದನ್ನು ಪುರಸ್ಕರಿಸಲಾಗಿದೆ ).



ಪಾಟೀ ಸವಾಲುಃ ಅಭಿಯೋಜಕರವರಿಂದಃ

ದಿಃ 8-6-2021 ರಂದು , ದಿಃ 16-6-2021 ರಂದು ಮತ್ತು ದಿಃ 10-8-2021 ರಂದು ನಾನನು ಪೋಲೀಸರ ಮುಂದೆ ಹೇಳಿಕೆ ಮತ್ತು ಮರು ಹೇಳಿಕೆಗಳನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ .

ಮೃತ ನನ್ನ ಅತ್ತೆ ಜಯಮ್ಮ ಮತ್ತು ರಾಮಲಕ್ಷ್ಮಿ ಒಂದೇ ಮನೆಯಲ್ಲಿ ಇರುತ್ತಿದ್ದರು ಎಂದರೆ ಸರಿ . ಅವರು ಫೈನಾನ್ಸ್ ವ್ಯವಹಾರ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ .

1 ನೇ ಆರೋಪಿ ಅವರಿಬ್ಬರಿಗೆ ಬಹಳ ನಂಬಿಕಸ್ತನಾಗಿ ರೂ.3 ಲಕ್ಷ ಹಣ ಸಾಲವಾಗಿ ಪಡೆದಿದ್ದ ಎಂದರೆ ಸರಿಯಲ್ಲ . ಅದನ್ನು ವಾಪಾಸ್ಸು ಕೇಳಿದ್ದಕ್ಕೆ ಇದ್ದ ದ್ವೇಷದಿಂದ 1 ನೇ ಆರೋಪಿ ಇತರೇ ಆರೋಪಿತರೊಂದಿಗೆ ಸೇರಿ ನನ್ನ ಅತ್ತೆ ಮತ್ತು ನಾದಿನಿಯನ್ನು ಕಾರಿನಲ್ಲಿ ಅಪಹರಣ ಮಾಡಿಕೊಂಡು ಹೋಗಿದ್ದರು ಎಂದರೆ ಸರಿಯಲ್ಲ . ನಂತರ ನನ್ನ ಹೆಂಡತಿ ಚಾಸಾ 1 ರವರು ವಿಷಯ ಗೊತ್ತಾಗಿ ದೂರು ನೀಡಿದ್ದಳು ಎಂದರೆ ಗೊತ್ತಿಲ್ಲ .

ದಿಃ 8-6-2021 ರಂದು 1 ನೇ ಆರೋಪಿಯನ್ನು ಪೋಲಿಸರು ದಸ್ತಗಿರಿ ಮಾಡಿದಾಗ ಹಣಕಾಸಿನ ವಿಚಾರವಾಗಿ ಇತರೇ ಆರೋಪಿತರೊಂದಿಗೆ ಸೇರಿ ದಿಃ 21-3-2021 ರಂದು ರಾತ್ರಿ 9-30 ರ ಸುಮಾರಿಗೆ ದಾಸಾಪುರ ಗ್ರಾಮದ ಎಲ್ ಎಲ್ ಸಿ ಕೆನಾಲ್ ಬಳಿ ರಾಡಿನಿಂದ ಹೊಡೆದು ಕೊಲೆ ಮಾಡಿ ಬಂಗಾರದ ಆಭರಣ ತೆಗೆದುಕೊಂಡು ಕಾಲುವೆಗೆ ಎಸೆದಿರುತ್ತಾರೆ

ಎಂದು ಪೊಲೀಸರಿಂದ ತಿಳಿಯಿತು ಎಂದು ಈಗ ಓದಿ ಹೇಳಿದ ನಿಪಿ-51 ರಂತೆ ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ . ಅದೇ ರೀತಿ ಬಂಗಾರದ ಆಭರಣಗಳನ್ನು ಒತ್ತೆ ಇಟ್ಟ ಬಗ್ಗೆ ಮತ್ತು ಇನ್ನಿಬ್ಬರು ಆರೋಪಿತರ ಹೆಸರುಗಳನ್ನು ಕೇಳಿ ತಿಳಿದುಕೊಂಡ ಬಗ್ಗೆ ನಿಪಿ-52 ರಂತೆ ಹೇಳಿಕೆಯನ್ನು ನೀಡಿದ್ದೆ ಎಂದರೆ ಸರಿಯಲ್ಲ ಮತ್ತು ಸದರಿ ಘಟನೆಯ ವಿಚಾರ ಕುರಿತಂತೆ ಡಿ ವೈ ಎಸ್ ಪಿ ರವರು ವಿಚಾರಣೆ ಮಾಡಿದಾಗ ಆರೋಪಿತರ ಕೃತ್ಯದ ಬಗ್ಗೆ ಮತ್ತು ನನ್ನ ಅತ್ತೆ ಮತ್ತು ನಾದಿನಿಯ ಸಾವನ್ನು ಕುರಿತಂತೆ ಈಗ ಓದಿ ಹೇಳಿದ ನಿಪಿ-52 ರಂತೆ ವಿವರವಾದ ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ .



ನನಗೆ ಘಟನೆಯ ಸಂಪೂರ್ಣ ಮಾಹಿತಿ ಇದ್ದರೂ ಸಹ ಈಗ ನಾವು ಮತ್ತು ಆರೋಪಿತರು ರಾಜಿಯಾಗಿ ಏನೂ ಗೊತ್ತಿಲ್ಲ ಎಂದು ಆರೋಪಿತರಿಗೆ ಅನುಕೂಲವಾಗಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಎಸ್ ಆರ್ ಪಿ ವಕೀಲರು ಹಾಜರಿದ್ದು ಪಾಟೀ ಸವಾಲು ಇರುವುದಿಲ್ಲ ಎಂದು ನುಡಿದಿರುತ್ತಾರೆ .

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ. ಸರಿ ಇದೆ.

ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಲಯ, ಬಳ್ಳಾರಿ.